**ಅಸಲು ದಾವಾ ಸಂಖ್ಯೆಃ 571 /2016**

**ಪಿ.ಡಬ್ಲೂ -1**

ದಿಃ 08-12-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು ಶ್ರೀ. RSM ರವರಿಂದಃ-**

1. ಓಸ ಎಸ 619/2009 ದಾವೆ ಇತ್ತು ಎಂದು ನನಗೆ ನಿಖರವಾಗಿ ಯಾವಾಗ ತಿಳಿದು ಬಂದಿರುತ್ತದೆ ಎಂದು ಹೇಳಲು ಆಗುವುದಿಲ್ಲ. ಈ ದಾವೆಯಲ್ಲಿ ಏನನ್ನು ಕೋರಿ ಸಲ್ಲಿಸಿರಿರುತ್ತೀರಿ ಎಂದರೆ ಓಸ ಎಸ 619/2009 ನಮಗೆ ಬಂಧನಕಾರಿ ಅಲ್ಲ ಎಂದು ಕೋರಿ ಸಲ್ಲಿಸಿರುತ್ತೇನೆ. ಓಎಸ ಸಂಖ್ಯೆ 619/2009 ದಾವೆಯು ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿದ್ದಾಗ ನನಗೆ ಗೊತ್ತಿರಲಿಲ್ಲ ಸಾಕ್ಷಿ ಮುಂದುವರೆದು ಡಿಕ್ರಿಯಾದ ಬಳಿಕ ತಿಳಿದು ಬಂದಿರುತ್ತದೆ. ಸದರಿ ಡಿಕ್ರಿಯಾವಾಗ ಆಗಿರುತ್ತದೆ ಎಂದು ನಿಖರವಾದ ದಿನಾಂಕ ನನಗೆ ಗೊತ್ತಿಲ್ಲ. ನೀವು ನ್ಯಾಯಾಲಯದಲ್ಲಿ ಹಾಜರಪಡಿಸಿದ ಡಿಕ್ರಿ ಪ್ರತಿಯನ್ನು ನೀವು ನಿಮ್ಮ ವಕೀಲರಿಗೆ ನೀಡಿರುತ್ತೀರಿ ಎಂದರೆ ಇಲ್ಲ ವಕೀಲರೆ ದೃಡಿಕೃತ ಪ್ರತಿಯನ್ನು ಪಡೆದು ಹಾಜರಪಡಿಸಿರುತ್ತೆರ ಎಂದು ನುಡಿಯುತ್ತಾರೆ. ಓಸ ಎಸ 619/2009 ಯಾವ ದಿನಾಂಕದಂದು ಏನು ಆದೇಶ ಆಗಿದೆ ಎಂದು ತಿಳಿದು ಕೊಳ್ಳಲು ನಾನು ಯಾವುದೇ ಪ್ರಯತ್ನ ಪಟ್ಟಿಲ್ಲ. ಸದರಿ ಓಸ ಎಸ 619/2009 ದಿನಾಂಕ 30-01-2012 ರಂದು ಡಿಕ್ರಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಡಿಕ್ರಿಯಾದ ಮೂರು ವರ್ಷದ ಒಳಗೆ ನೀವು ದಾವೆ ಸಲ್ಲಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಆರಎಸ ನಂಬರ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಮೂಲ ಮಾಲಿಕರು ಯಾರೂ ಎಂದು ನನಗೆ ಗೊತ್ತಿಲ್ಲ. ಸಿಟಿಎಸ ಉತಾರೆಯಲ್ಲಿ ಯಾರ ಹೆಸರು ನಮೂದು ಇದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆಗೆ ಮಾರಾಟ ಮಾಡಿದವರ ಹೆಸರು ನಮೂದು ಇದೆ ಎಂದು ಎಂದು ನುಡಿಯುತ್ತಾರೆ.

2. ನಿಪಿ-1 ರಲ್ಲಿ ಮಾಲಕರ ಹೆಸರು ಮುನಿಸಿ ಪಾಲಿಟಿ ಬೆಳಗಾವಿ ಎಂದು ನಮೂದು ಇದೆ ಎಂದರೆ ಸರಿ. 1 ನೇ ಪ್ರತಿವಾದಿ ತನ್ನ ಪ್ರತಿವಾದ ಪತ್ರದಲ್ಲಿ ಏನನ್ನು ಬರೆದಿರುತ್ತಾರೆ ಎಂದು ನಾನು ನನ್ನ ವಕೀಲರ ಮುಖಾಂತರ ತಿಳಿದುಕೊಳ್ಳು ಪ್ರಯತ್ನ ಮಾಡಿಲ್ಲ . ಓಸ ಎಸ 619/2009 ರ ಮೇಲ್ಮನವಿಯು ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ನನ್ನ ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ದಾವಾ ಆಸ್ತಿಯ ಉತಾರೆಯ ನಿಪಿ-1 ರಲ್ಲಿ ಬಾಗ ಸಿಕಂದರ ದರ್ಗಾ ಎಂದು ಸಹ ನಮೂದು ಇದೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ನೀವು ಬಾಗ ಸಿಕಂದರ ದರ್ಗಾದವರನ್ನು ಪಕ್ಷಗಾರರನ್ನಾಗಿ ಮಾಡಲು ಪ್ರಯತ್ನ ಪಟ್ಟಿಲ್ಲ ಎಂದರೆ ಸರಿ .

ದಿನಾಂಕ 05-05-1986 ರಂದು 1 ನೇ ಪ್ರತಿವಾದಿಗೆ ಶೇಖ ಅಬ್ದುಲ ಸಾಬ ವಲ್ಲದ, ಶೇಖ ಅಬ್ದುಲ ಖಾದರ ಸಾಹೇಬ ಪಿರಜಾದೆ ಅವರು ನಿರಂತರ ಪಟ್ಟಾದ ಮೂಲಕ ದಾವಾ ಆಸ್ತಿಯನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನಿರಂತರ ಪಟ್ಟಾ ಖಾಯಂ ಲೀಸ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರು ಸಹ ಉದ್ದೇಶ ಪೂರ್ವಕವಾಗಿ ನಾನು ವಾದ ಪತ್ರದಲ್ಲಿ ಅದನ್ನು ನಮೂದಿಸಿಲ್ಲ ಎಂದರೆ ನನಗೆ ಆ ವಿಚಾರ ಗೊತ್ತಿಲ್ಲ . 1 ನೇ ಪ್ರತಿವಾದಿಗೆ ನಿರಂತರ ಪಟ್ಟಾ ಇರುವ ಕಾರಣ ನಿಮ್ಮ ಮಾರಾಟ ಗಾರರರಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡುವ ಹಕ್ಕು ಇಲ್ಲ ಎಂದರೆ ನನಗೆ ಗೊತ್ತಿಲ್ಲ . ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲದೆ ಇದ್ದರು ನಾನು ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯದಲ್ಲಿ ಹಾಜರಪಡಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಕಬ್ಜೆಯು ನನ್ನ ಬಳಿ ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಕೇಸನ್ನು ದಾಖಲಿಸಿದ್ದೇನೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**